**2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ**

**ಸಿ.ಸಿ.ನಂಃ 30349 ಃ2018**

| | | | |
|---|---|---|---|
| **ಸಾಕ್ಷಿದಾರನ ಹೆಸರು** | **ಮೋಹನ್ ಡಿ ಪಟೇಲ್** | **ಸಿ ಡಬ್ಲ್ಯು** | 29 |
| **ತಂದೆಯ ಹೆಸರು** | **ದೊಡ್ಡೇಗೌಡ** | **ಪಿ ಡಬ್ಲ್ಯು** | 1 |
| **ವಯಸ್ಸು** | **41 ವರ್ಷ** | | |
| **ಉದ್ಯೋಗ** | **ಪಿ.ಐ** | | |
| **ವಾಸಸ್ಥಾನ** | **ಬನಶಂಕರಿ 2 ನೇ ಹಂತ, ಬೆಂಗಳೂರು** | | |

**<u>ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 27.10.2023.</u>**

**<u>ಕಲಂ.299 ಸಿ.ಆರ್.ಪಿ.ಸಿ ಅಡಿಯಲ್ಲಿ ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-</u>**

ನಾನು ಡಿಸೆಂಬರ್ 2012 ರಿಂದ ಮೇ 2016 ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕಃ18.12.2012 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮದ್ಯಾಹ್ನ 1.30 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರು, ಮಹಜರ್, ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ಹಾಗೂ 1 ರಿಂದ 4 ನೇ ಆರೋಪಿತರನ್ನು ಹಾಜರುಪಡಿಸಿದ ಮೇರೆಗೆ ಅವುಗಳನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ಮಾಲುಪಟ್ಟಿ ಸಂ.159/2012 ರಲ್ಲಿ ನಮೂದಿಸಿರುತ್ತೇನೆ. ನಂತರ ಚಾಸಾ-2, 3, 22 ರಿಂದ 28 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ 1 ರಿಂದ 4 ನೇ ಆರೋಪಿತರ ವಿರುದ್ದ ದಸ್ತಗಿರಿ ಕ್ರಮ ಜರುಗಿಸಿ ಅವರ ಸ್ವ ಇಚ್ಚಾ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ನಂತರ ಆರೋಪಿತರನ್ನು ಸುರಕ್ಷಿತ ಬಂಧನದಲ್ಲಿ ಇಟ್ಟಿರುತ್ತೇನೆ. ದಿಃ19.12.2012 ರಂದು 1 ನೇ ಆರೋಪಿಯ ಮುಂದುವರಿದ ಹೇಳಿಕೆಯನ್ನು ದಾಖಲಿಸಿರುತ್ತೇನೆ. ನಂತರ 1 ರಿಂದ 4 ನೇ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಪೊಲೀಸ್ ಬಂಧನಕ್ಕೆ ಪಡೆದಿರುತ್ತೇನೆ. ದಿಃ20.12.2012 ರಂದು 1 ನೇ ಆರೋಪಿಯ ಮಾಹಿತಿಯ ಮೇರೆಗೆ ಚಾಸಾ-6 ರವರ ಅಂಗಡಿಗೆ ಭೇಟಿ ನೀಡಿ ಚಾಸಾ-4 ಮತ್ತು 5 ರವರ

ಸಮಕ್ಷಮ 1 ಮತ್ತು 2 ನೇ ಆರೋಪಿತರು ಕಳ್ಳತನ ಮಾಡಿ ಮಾರಾಟ ಮಾಡಿದ್ದ ಎರಡು ಚಿನ್ನದ ಸರಗಳನ್ನು ಪಂಚನಾಮೆಯ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಮದ್ಯಾಹ್ನ 1.45 ರಿಂದ 2.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಅಮಾನತ್ತುಪಡಿಸಿಕೊಂಡ ಮಾಲನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನಿವೇದಿಸಿಕೊಂಡಿರುತ್ತೇನೆ. ನಂತರ ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ನಂತರ ಚಾಸಾ-17 ಮತ್ತು 18 ರವರನ್ನು ಠಾಣೆಗೆ ಬರಮಾಡಿಕೊಂಡು ಆರೋಪಿ ಹಾಗೂ ಮಾಲನ್ನು ಗುರ್ತಿಸಿದ ಬಗ್ಗೆ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ21.12.2012 ರಂದು 1 ನೇ ಆರೋಪಿಯ ಮಾಹಿತಿಯ ಮೇರೆಗೆ ಚಾಸಾ-9 ರವರ ಅಂಗಡಿಗೆ ಭೇಟಿ ನೀಡಿ 1 ನೇ ಆರೋಪಿ ಇತರ ಆರೋಪಿತರೊಂದಿಗೆ ಸೇರಿ ಕದ್ದು ಮಾರಾಟ ಮಾಡಿದ ಒಂದು ಚಿನ್ನದ ಮಾಂಗಲ್ಯ ಸರವನ್ನು ಪಂಚರಾದ ಚಾಸಾ-7 ಮತ್ತು 8 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಪಂಚನಾಮೆ ಬರೆದು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಸದರಿ ಮಾಲನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ 1 ನೇ ಆರೋಪಿಯ ಮಾಹಿತಿಯ ಮೇರೆಗೆ ಚಾಸಾ-12 ರವರ ಅಂಗಡಿಗೆ ಭೇಟಿ ನೀಡಿ 1 ನೇ ಆರೋಪಿ ಇತರ ಆರೋಪಿತರೊಂದಿಗೆ ಸೇರಿ ಕದ್ದು ಮಾರಾಟ ಮಾಡಿದ ಒಂದು ಚಿನ್ನದ ಸರವನ್ನು ಚಾಸಾ-10 ಮತ್ತು 11 ರವರ ಸಮಕ್ಷಮ ಮದ್ಯಾಹ್ನ 1.00 ರಿಂದ 2.00 ಗಂಟೆಯವರೆಗೆ ಪಂಚನಾಮೆ ಬರೆದು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಸದರಿ ಮಾಲನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-7 ರಿಂದ 12 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಚಾಸಾ-19 ಮತ್ತು 20 ರವರನ್ನು ಠಾಣೆಗೆ ಬರಮಾಡಿಕೊಂಡು ಮಾಲು ಮತ್ತು ಆರೋಪಿತರನ್ನು ಗುರ್ತಿಸಿದ ಬಗ್ಗೆ ಅವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ23.12.2012 ರಂದು 1 ನೇ ಆರೋಪಿಯ ಮಾಹಿತಿಯ ಮೇರೆಗೆ ಚಾಸಾ-13 ಮತ್ತು 14 ರವರ ಸಮಕ್ಷಮ ಸಂಜೆ 4.00 ರಿಂದ 5.00 ಗಂಟೆಯವರೆಗೆ ಮಹಜರು ಕ್ರಮ ಜರುಗಿಸಿ ಒಂದು ಚಿನ್ನದ ಸರವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಸದರಿ ಮಾಲನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-13 ಮತ್ತು 14 ರವರ ಹೇಳಿಕೆಗಳನ್ನು

ದಾಖಲಿಸಿರುತ್ತೇನೆ. ನಂತರ ಚಾಸಾ-21 ರವರನ್ನು ಠಾಣೆಗೆ ಬರಮಾಡಿಕೊಂಡು ಅವರು ಮಾಲು ಮತ್ತು ಆರೋಪಿತರನ್ನು ಗುರ್ತಿಸಿದ ಬಗ್ಗೆ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ24.12.2012 ರಂದು 1 ನೇ ಆರೋಪಿಯ ಮಾಹಿತಿಯ ಮೇರೆಗೆ ಚಾಸಾ-15 ಮತ್ತು 16 ರವರ ಸಮಕ್ಷಮ ಬೆಳಿಗ್ಗೆ 9.00 ರಿಂದ 10.00 ಗಂಟೆಯವರೆಗೆ ಮಹಜರು ಕ್ರಮ ಜರುಗಿಸಿ ಕೃತ್ಯಕ್ಕೆ ಬಳಸಿದ ದ್ವಿಚಕ್ರವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಸದರಿ ಮಾಲನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-15 ಮತ್ತು 16 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ನಂತರ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ04.01.2013 ರಂದು ಮಾಲುಪಟ್ಟಿ ಸಂ.163/2012 ರಲ್ಲಿ ನಮೂದಿಸಿದ ಮಾಲುಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ಮಧ್ಯಂತರ ಸ್ವಾ ಧೀನಕ್ಕೆ ನೀಡಿರುತ್ತೇನೆ. ದಿಃ12.01.2013 ರಂದು ಮಾಲುಪಟ್ಟಿ ಸಂ.162/2012 ರಲ್ಲಿ ನಮೂದಿಸಿದ ಮಾಲುಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ಮಧ್ಯಂತರ ಸ್ವಾ ಧೀನಕ್ಕೆ ನೀಡಿರುತ್ತೇನೆ. ದಿಃ26.01.2013 ರಂದು ಮಾಲುಪಟ್ಟಿ ಸಂ.160/2012 ರಲ್ಲಿ ನಮೂದಿಸಿದ ಮಾಲುಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ಮಧ್ಯಂತರ ಸ್ವಾ ಧೀನಕ್ಕೆ ನೀಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ. ಆರೋಪಿತರನ್ನು ಹಾಗೂ ಮಾಲುಗಳನ್ನು ನೋಡಿದರೆ ಗುರ್ತಿಸುತ್ತೇನೆ. ಮೇಲೆ ಹೇಳಿದ ದಾಖಲೆಗಳ ಮೂಲದಾಖಲೆಗಳನ್ನು ಮೂಲ ದೋಷಾರೋಪಣಾ ಪಟ್ಟಿಯೊಂದಿಗೆ ಸಲ್ಲಿಸಿರುತ್ತೇನೆ. ಅವುಗಳ ಜೆರಾಕ್ಸ್ ದಾಖಲೆಗಳನ್ನು ನೋಡಿ ಗುರ್ತಿಸುತ್ತಿದ್ದೇನೆ.

**(ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇದೆ**

**(ವೇದಮೂರ್ತಿ ಬಿ.ಎಸ್.)**

**2ನೇ ಅ ಮು ಮ ದಂ.**